**All India Radio: Bangalore**
**National Bulletin In Kannada**
**27.06.2025 / 1.10 pm**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**27.06.2025 / 1.10 pm**

**<><*<><>*><>**

ಮುಖ್ಯಾಂಶಗಳು

೧. ನವದೆಹಲಿಯಲ್ಲಿಂದು ಅಂತಾರಾಷ್ಟ್ರೀಯ ಎಂಎಸ್ಎಂಇ ದಿನದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಗಿ

೨. ಎಸ್-೪೦೦ ವ್ಯವಸ್ಥೆ ಸೇರಿದಂತೆ ನಿರ್ಣಾಯಕ ಮಿಲಿಟರಿ ಸಾಮಾಗ್ರಿ ಪೂರೈಕೆಗೆ ರಷ್ಯಾದೊಂದಿಗೆ ಭಾರತದ ರಕ್ಷಣಾ ಸಚಿವರ ಮಾತುಕತೆ

೩. ೨೦೨೬ರ ಸಕ್ಕರೆ ಋತುವಿನಲ್ಲಿ ಶೇಕಡಾ ೧೫ರಷ್ಟು ಉತ್ಪಾದನಾ ಪ್ರಮಾಣ ಹೆಚ್ಚಳ ನಿರೀಕ್ಷೆ

೪. ಓವರ್ ಕಡಿತಗೊಂಡ ಟಿ-೨೦ ಪಂದ್ಯಗಳಿಗೆ ನೂತನ ಪವರ್ ಪ್ಲೇ ನಿಯಮ ಪ್ರಕಟಿಸಿದ ಅಂತಾರಾಷ್ಟೀಯ ಕ್ರಿಕೆಟ್ ಮಂಡಳಿ

****************

ದೇಶದ ಸಣ್ಣ-ಅತೀಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ವಲಯ ದೇಶದ ಒಟ್ಟು ರಾಷ್ಟೀಯ ಉತ್ಪನಕ್ಕೆ ಗಮನಾರ್ಹ ಕೊಡುಗೆ ನೀಡುತ್ತಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ.ನವದೆಹಲಿಯಲ್ಲಿಂದು ಕೇಂದ್ರ ಸಣ್ಣ-ಅತೀಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವಾಲಯ ಆಯೋಜಿಸಿದ್ದ ಅಂತಾರಾಷ್ಟ್ರೀಯ ಎಂಎಸ್ಎಂಇ ದಿನದ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಅವರು ಈ ವಲಯ ತಳಮಟ್ಟದಲ್ಲಿ ನಾವೀನ್ಯತೆಗೆ ಉತ್ತೇಜನ ನೀಡುತ್ತಿದೆ. ಎಂಎಸ್ಎಂಇ ಪರಿಸರ ವ್ಯವಸ್ಥೆ ಮಹತ್ವ ಪೂರ್ಣ ಮಾತ್ರವಲ್ಲದೇ ಅಗತ್ಯ ಆಗಿದೆ. ದೇಶದ ಯುವಶಕ್ತಿಯ ಉಪಯೋಗ ಈ ವಲಯಕ್ಕೆ ಲಭ್ಯವಾಗಿದೆ. ಈ ವಲಯದ ಬೆಳವಣಿಗೆಯಿಂದ ವಿಶೇಷವಾಗಿ ಗ್ರಾಮೀಣ ಭಾಗಗಳಲ್ಲಿ ಉದ್ಯೋಗವಕಾಶಗಳು ಹೆಚ್ಚಾಗಿವೆ. ಈ ರೀತಿ ಬಡವರ ಸಬಲೀಕರಣಕ್ಕೆ ಈ ವಲಯ ಕೊಡುಗೆ ನೀಡಿದೆ.

ಧ್ವನಿ : ರಾಷ್ಟ್ರಪತಿ, ದ್ರೌಪದಿ ಮುರ್ಮು ೩೫ ಸೆಕೆಂಡುಗಳು

****************

ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಎಸ್-೪೦೦ ವ್ಯವಸ್ಥೆ ಪೂರೈಕೆ ಸುಖೋಯ್-೩೦, ಎಂಕೆಐ ಸುಧಾರಣೆಗಳು ಮತ್ತು ನಿರ್ಣಾಯಕ ಮಿಲಿಟರಿ ಸಾಮಾಗ್ರಿಗಳ ಖರೀದಿಯ ಕುರಿತಂತೆ ರಷ್ಯಾದೊಂದಿಗೆ ಮಹತ್ವದ ಮಾತುಕತೆ ನಡೆಸಿದ್ದಾರೆ. ಚೀನಾದ ಕ್ವಿಂಗ್ಡಾವೋಯಲ್ಲಿ ನಡೆಯುತ್ತಿರುವ ಶಾಂಘೈ ಸಹಕಾರ ಒಕ್ಕೂಟ ಎಸ್‌ಸಿಒ ರಕ್ಷಣಾ ಸಚಿವರ ಸಭೆಯ ನೇಪಥ್ಯದಲ್ಲಿ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಇಂದು ರಷ್ಯಾ ಸಹವರ್ತಿ ಆಂಡ್ರೆ ಬೆಲೌಸೊವ್ ಹಾಗೂ ಚೀನಾದ ರಕ್ಷಣಾ ಸಚಿವ ಡಾಂಗ್ ಯುನ್ ಅವರೊಂದಿಗೆ ಪ್ರತ್ಯೇಕ ದ್ವಿಪಕ್ಷೀಯ ಸಭೆ ನಡೆಸಿದ್ದಾರೆ. ರಷ್ಯಾ ಸಚಿವರೊಂದಿಗಿನ ಸಭೆಯಲ್ಲಿ ಗಡಿಯಾಚೆಗಿನ ಭಯೋತ್ಪಾದನೆ ಪ್ರಸ್ತುತ ಜಾಗತಿಕ ರಾಜಕೀಯ ವಿದ್ಯಮಾನಗಳು, ಭಾರತ ರಷ್ಯಾ ರಕ್ಷಣಾ ಸಹಕಾರ ಸೇರಿದಂತೆ ವಿವಿಧ ವಿಷಯಗಳ ಕುರಿತು ಚರ್ಚೆ ನಡೆದಿದೆ. ಚೀನಾ ಸಚಿವರೊಂದಿಗಿನ ಮಾತುಕತೆಯ ವೇಳೆ ದ್ವಿಪಕ್ಷೀಯ ಪಾಲುದಾರಿಕೆಗೆ ಸಂಬಂಧಿಸಿದ ಸಮಸ್ಯೆಗಳ ಕುರಿತಂತೆ ಉತ್ಪಾದಕ ಹಾಗೂ ದೂರದೃಷ್ಟಿ ವಿಚಾರಗಳ ವಿನಿಮಯ ಮಾಡಿಕೊಳ್ಳಲಾಗಿದೆ ಎಂದು ಸಚಿವ ರಾಜನಾಥ್ ಸಿಂಗ್ ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ. ಇದೇ ವೇಳೆ ಸಚಿವರು ೬ ವರ್ಷಗಳ ಬಳಿಕ ಪುನರಾರಂಭಗೊಂಡಿರುವ ಕೈಲಾಸ ಮಾನಸ ಸರೋವರ ಯಾತ್ರೆಯ ಕುರಿತು ಹರ್ಷ ವ್ಯಕ್ತಪಡಿಸಿದ್ದಾರೆ.

****************

೨೦೨೬ರ ಸಕ್ಕರೆ ಋತುವಿನಲ್ಲಿ ಭಾರತದಲ್ಲಿ ಸಕ್ಕರೆ ಉತ್ಪಾದನೆ ಸುಮಾರು ಶೇಕಡಾ ೧೫ ರಷ್ಟು ಹೆಚ್ಚಾಗಿ ಸುಮಾರು ೩೫ ಟನ್ ಗೆ ಏರಿಕೆಯಾಗುವ ನಿರೀಕ್ಷೆಯಿದೆ ಎಂದು ಕ್ರೆಡಿಟ್ ರೇಟಿಂಗ್ ಸಂಸ್ಥೆಯೊಂದು ಪ್ರಕಟಿಸಿದ ವರದಿ ತಿಳಿಸಿದೆ.ಸರಾಸರಿಗಿಂತ ಹೆಚ್ಚಿನ ಮುಂಗಾರು, ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಇನ್ನು ಹೆಚ್ಚಿನ ಸಕ್ಕರೆಕಬ್ಬು ಬೆಳವಣಿಗೆಗೆ ದಾರಿ ಮಾಡಿಕೊಡಲಿದ್ದು, ಈ ಬೆಳವಣಿಗೆಗೆ ಮುಖ್ಯ ಕಾರಣವಾಗಿದೆ ಎಂದು ವರದಿ ತಿಳಿಸಿದೆ.ಉತ್ಪಾದನೆಯ ಈ ಏರಿಕೆಯಿಂದ ದೇಶೀಯ ಸರಬರಾಜು ಕುರಿತ ಆತಂಕ ನಿವಾರಣೆಯಾಗಬಹುದು ಎಂಬ ನಿರೀಕ್ಷೆಯಿದೆ. ಜೊತೆಗೆ ಇದು ಹೆಚ್ಚಿನ ಎಥನಾಲ್ ವ್ಯತ್ಯಯಕ್ಕೆ ಸಹಕಾರಿಯಾಗುವ ಸಾಧ್ಯತೆಯಿದ್ದು, ಅನುಕೂಲಕರ ನೀತಿಗಳಿದ್ದರೆ ಸಕ್ಕರೆ ರಫ್ತು ಪುನರಾರಂಭಗೊಳ್ಳಬಹುದು ಎಂದು ವರದಿ ಅಭಿಪ್ರಾಯಪಟ್ಟಿದೆ.

****************

೧೯೭೫ರಲ್ಲಿ ವಿಧಿಸಲಾದ ತುರ್ತುಪರಿಸ್ಥಿತಿ ದೇಶ ಮತ್ತು ಸಮಾಜದ ಮನೋಬಲವನ್ನು ಕುಗ್ಗಿಸುವ ಉದ್ದೇಶದಿಂದಲೇ ವಿಧಿಸಲಾಗಿತ್ತು ಎಂದು ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್ ತಿಳಿಸಿದ್ದಾರೆ. ನವದೆಹಲಿಯಲ್ಲಿಂದು ಆಯೋಜಿಸಲಾಗಿದ್ದ ತುರ್ತುಪರಿಸ್ಥಿತಿಯ ೫೦ನೇ ವರ್ಷಾಚರಣೆ ಸಮಾರಂಭದಲ್ಲಿ ಮಾತನಾಡಿರುವ ಅವರು ಸ್ವಾತಂತ್ರ್ಯ ಯಾವಾಗಲೂ ಮೌಲ್ಯಯುತವಾಗಿರಬೇಕೆ ಹೊರತು ಸ್ವೇಚ್ಛಾಚಾರವೆಂದು ಎಂದಿಗೂ ತಿಳಿಯಬಾರದೆಂಬುದನ್ನು ತುರ್ತುಪರಿಸ್ಥಿತಿ ತಿಳಿಸಿಕೊಟ್ಟಿದೆ ಎಂದರು. ದೇಶಕ್ಕಿಂತ ಸ್ವಹಿತಾಸಕ್ತಿಯೇ ಪ್ರಮುಖವಾದಾಗ ಇಂತಹ ಪರಿಸ್ಥಿತಿಗಳು ಎದುರಾಗುತ್ತವೆ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಒಟ್ಟು ಐದು ಸಂವಿಧಾನ ತಿದ್ದುಪಡಿಗಳನ್ನು ಮಾಡಲಾಗಿದ್ದು ೪೮ ಆದೇಶಗಳನ್ನು ಹೊರಡಿಸಲಾಗಿತ್ತು ಎಂದು ಸಚಿವ ಜೈಶಂಕರ್ ಮಾಹಿತಿ ನೀಡಿದರು.

**ಧ್ವನಿ : ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್, ೩೦ ಸೆಕೆಂಡುಗಳು**

****************

ನವದೆಹಲಿಯಲ್ಲಿಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ವಿವಿಧ ಮಾನದಂಡಗಳ ಆಧಾರದಲ್ಲಿ ಸಾರ್ವಜನಿಕ ವಲಯ ಬ್ಯಾಂಕ್‌ಗಳ ಕಾರ್ಯಕ್ಷಮತೆಯನ್ನು ಪರಿಶೀಲಿಸಲು ಆಯೋಜಿಸಲಾದ ಸಭೆಯ ಅಧ್ಯಕ್ಷತೆ ವಹಿಸಿದರು.ಈ ಸಭೆಯಲ್ಲಿ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ, ಹಣಕಾಸು ಸೇವೆಗಳ ಇಲಾಖೆಯ ಕಾರ್ಯದರ್ಶಿ ಎಂ. ನಾಗರಾಜು ಮತ್ತು ವಿವಿಧ ಸಾರ್ವಜನಿಕ ವಲಯದ ಬ್ಯಾಂಕ್‌ಗಳ ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಾಹಕರು ಉಪಸ್ಥಿತರಿದ್ದರು.

****************

ಒಡಿಶಾದ ಪವಿತ್ರ ನಗರ ಪುರಿಯಲ್ಲಿಂದು ವಿಶ್ವವಿಖ್ಯಾತ ಜಗನ್ನಾಥ ಮತ್ತು ಅವರ ಸಹೋದರ-ಸಹೋದರಿ ದೇವತೆಗಳ ರಥಯಾತ್ರೆ ನಡೆಯಲಿದೆ. ಜಗತ್ತಿನ ಮೂಲೆಮೂಲೆಗಳಿಂದ ಸಾವಿರಾರು ಭಕ್ತರು ಪುರಿಗೆ ಆಗಮಿಸಿ ಈ ೯ ದಿನಗಳ ಶ್ರೀ ಗುಂಡಿಚಾ ಮಂದಿರದವರೆಗಿನ ಯಾತ್ರೆಯನ್ನು ಕಣ್ತುಂಬಿಕೊಳ್ಳಲು ಆಗಮಿಸಿದ್ದಾರೆ.೧೨ನೇ ಶತಮಾನಕ್ಕೆ ಸೇರಿದ ಪುರಿಯ ಶ್ರೀ ಜಗನ್ನಾಥ ದೇವಾಲಯದ ಸೇವಕರಿಂದ ದೇವತೆಗಳ ಮೂರು ಕಬ್ಬಿಣದ ರಥಗಳಾದ ನಂದಿಘೋಷ, ತಾಳಧ್ವಜ ಮತ್ತು ದರ್ಪ ದಲನ ರಥಗಳನ್ನು ರಥಖಳದಿಂದ ಲಾಯನ್ಸ್ ಗೇಟ್‌ವರೆಗೆ ತಂದು

ನಿಲ್ಲಿಸಲಾಗಿದೆ. ದೇವತೆಗಳನ್ನು ರಥದವರೆಗೆ ತರುವ ಭವ್ಯ ಮೆರವಣಿಗೆ ನಡೆಯಿತು.ಮಧ್ಯಾಹ್ನ ೩೦ರಿಂದ ೩.೩೦ರ ವರೆಗೆ ಗಜಪತಿ ರಾಜ ದಿವ್ಯಸಿಂಗ್ ದೇವ್ ಅವರು ಮೂರು ರಥಗಳ ಮೇಲೂ 'ಛೇರಾ ಪಹಾರಾ' ವಿಧಿಯನ್ನು ನೆರವೇರಿಸಲಿದ್ದಾರೆ.

****************

ಪುರಿ ಜಗನ್ನಾಥ ರಥಯಾತ್ರೆಯ ಅಂಗವಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ ಸಮಸ್ತ ನಾಗರಿಕರಿಗೆ ಶುಭಾಶಯಗಳನ್ನು  ಕೋರಿದ್ದಾರೆ. ಈ ರಥಯಾತ್ರೆಯನ್ನು ಕಣ್ತುಂಬಿಕೊಂಡು ಲಕ್ಷಾಂತರ ಭಕ್ತಾದಿಗಳು ದಿವ್ಯ ಅನುಭವ ಪಡೆಯಲಿದ್ದಾರೆ ಎಂದು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ತಿಳಿಸಿರುವ ರಾಷ್ಟ್ರಪತಿ, ಜಗತ್ತಿನೆಲ್ಲೆಡೆ ಶಾಂತಿ, ಸೌಹಾರ್ದತೆ ಪಸರಿಸುವಂತೆ ಭಗವಾನ್ ಜಗನ್ನಾಥನಲ್ಲಿ ಪ್ರಾರ್ಥಿಸಿದ್ದಾರೆ.ತಮ್ಮ ಸಂದೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ನಾಡಿನ ಸಮಸ್ತ ಜನತೆಗೆ ಭಗವಾನ್ ಜಗನ್ನಾಥರ ರಥಯಾತ್ರೆ ಶುಭ ಸಂದರ್ಭದ ಶುಭಾಶಯಗಳನ್ನು ಕೋರಿದ್ದು, ಈ ಶ್ರದ್ಧಾಭಕ್ತಿಯ ಹಬ್ಬ ಎಲ್ಲರ ಬಾಳಿನಲ್ಲಿ ಸುಖ ಸಮೃದ್ಧಿ, ಆಯುರಾರೋಗ್ಯ ತರಲಿ ಎಂದು ಹಾರೈಸಿದರು.

****************

ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ-ಐಸಿಸಿ ಮಳೆ ಅಥವಾ ಕಡಿಮೆ ಬೆಳಕು ಸೇರಿದಂತೆ ವಿವಿಧ ಕಾರಣಗಳಿಗೆ ಕಡಿತಗೊಳ್ಳುವ ಟಿ-೨೦ ಪಂದ್ಯಗಳಿಗಾಗಿ ಹೊಸ ಪವರ್ ಪ್ಲೇ ನಿಯಮಗಳನ್ನು ಪ್ರಕಟಿಸಿದೆ. ಈ ನಿಯಮಗಳು ಮುಂದಿನ ತಿಂಗಳಿಂದ ಜಾರಿಗೆ ಬರಲಿವೆ.ಪಂದ್ಯದ ನಿಗದಿತ ಓವರ್‌ಗಳಲ್ಲಿ ಕಡಿತ ಉಂಟಾಗಿದ್ದರೆ, ಬ್ಯಾಟಿಂಗ್ ಇನಿಂಗ್ಸ್‌ಗಳಲ್ಲಿ ಇರುವ ಪವರ್‌ಪ್ಲೇ ಓವರ್‌ಗಳ ನಿಖರ ಪ್ರಮಾಣವನ್ನು ಈಗ ಸ್ಪಷ್ಟವಾಗಿ ನಿರ್ಧರಿಸಲಾಗಿದೆ.ಐಸಿಸಿ ನೀಡಿರುವ ಹೊಸ ನಿಯಮಗಳ ಪ್ರಕಾರ, ೮ ಓವರ್‌ಗಳ ಇನಿಂಗ್ಸ್ ನಲ್ಲಿ ೨.೨ ಓವರ್‌ಗಳು ಪವರ್‌ಪ್ಲೇ ಇರಲಿದೆ. ಈ ಅವಧಿಯಲ್ಲಿ ೩೦-ಯಾರ್ಡ್ ವಲಯದ ಹೊರಗೆ ಕೇವಲ ೨ ಫೀಲ್ಡರ್‌ಗಳನ್ನು ಇರಿಸಬಹುದು. ೫ ಓವರ್‌ಗಳ ಇನಿಂಗ್ಸ್ ನಲ್ಲಿ ೧.೩ ಓವರ್‌ಗಳು, ೧೦ ಓವರ್‌ಗಳ ಇನಿಂಗ್ಸ್ ನಲ್ಲಿ ೩ ಓವರ್‌ಗಳು ಹಾಗೂ ೧೫ ಓವರ್‌ಗಳ ಇನಿಂಗ್ಸ್ ನಲ್ಲಿ ೪.೩ ಓವರ್‌ಗಳು ಪವರ್‌ಪ್ಲೇ ಆಗಿರಲಿವೆ.ಈ ನಿಯಮಗಳು ಟಿ೨೦ ಕ್ರಿಕೆಟ್‌ನಲ್ಲಿ ಸಮತೋಲನ ಕಾಪಾಡುವ ಉದ್ದೇಶ ಹೊಂದಿವೆ.

****************

ಹಾಕಿ ಇಂಡಿಯಾ ಮಾಸ್ಟರ್ಸ್ ಕಪ್ ಟೂರ್ನಿ ಅಂತಿಮ ಹಂತ ತಲುಪಿದ್ದು, ಚೆನ್ನೈನಲ್ಲಿಂದು ನಡೆಯಲಿರುವ ಫೈನಲ್ ಪಂದ್ಯಗಳಲ್ಲಿ ಪುರುಷರ ವಿಭಾಗದಲ್ಲಿ ತಮಿಳುನಾಡು ಮತ್ತು ಮಹಾರಾಷ್ಟ್ರ ಡಗಳು ಹಾಗೂ ಮಹಿಳಾ ವಿಭಾಗದಲ್ಲಿ ಒಡಿಶಾ ಹಾಗೂ ಪಂಜಾಬ್ ತಂಡಗಳು ಪ್ರಶಸ್ತಿಗಾಗಿ ಸೆಣಸಾಟ ನಡೆಸಲಿವೆ.

****************